'ಟೈಮ್ ಅಂಡ್ ಲೈಫ್' ಪತ್ರಿಕೆಯಲ್ಲಿ ಕೆಲಸ ಸಿಕ್ಕಿತು. ಆದರೆ, ಅದು ಫೋಟೊಗ್ರಫಿ ಕೆಲಸವಲ್ಲ. ಫೋಟೊಗ್ರಫಿ ಬಿಳಿಯರಿಗೆ ಮಾತ್ರ ಮೀಸಲಾಗಿತ್ತು. ನನ್ನ ಕೆಲಸ ಫೋಟೊಗ್ರಾಫರ್ ಕಚೇರಿಗೆ ಬಂದಾಗ, ಅವರ ಕ್ಯಾಮೆರಾಗಳ ರೋಲುಗಳನ್ನು ತೆಗೆದು ಮಹಡಿಯಲ್ಲಿದ್ದ ಲ್ಯಾಬಿಗೆ ಹೋಗಿ ಪ್ರಾಸೆಸ್ ಮಾಡಿಸುವುದು. ನ್ಯೂಯಾರ್ಕಿನಲ್ಲಿ ಒಂದು ವರ್ಷ ಕೆಲಸ ಮಾಡಿದೆ. ಬೋರು ಹಿಡಿಯಿತು.

◆ **ಕೀನ್ಯಾದಲ್ಲಿ ಯಾವ ಪತ್ರಿಕೆಯಲ್ಲಿ ಕೆಲಸ ಮಾಡಿದಿರಿ?**

ಆಘಾಖಾನರ 'ದಿ ಡೈಲಿ ನೇಶನ್'ನಲ್ಲಿ. ಇದು ಕೀನ್ಯಾದಲ್ಲಿ ಜನಪ್ರಿಯವಾಗಿತ್ತು. ಅವರದೇ ಮತ್ತೊಂದು ಪತ್ರಿಕೆ 'ಈಸ್ಟ್ ಆಫ್ರಿಕನ್ ಸ್ಟ್ಯಾಂಡರ್ಡ್', ಬಿಳಿಯರಿಗಾಗಿ ಮೀಸಲಾಗಿತ್ತು. ಇದರಲ್ಲಿ ಒಬ್ಬನೇ ಒಬ್ಬ ವರ್ಣೀಯನಿದ್ದ. ಅವನ ಹೆಸರು ಛೋಟು ಕರಾಡಿಯಾ. ಗುಜರಾತಿ. ಅವನು ಪತ್ರಕರ್ತನಾಗಿದ್ದೇ ಒಂದು ರೋಚಕ ಕಥೆ. ಆಗ ಕೀನ್ಯಾದಲ್ಲಿ ಭಾರತೀಯ ಮೂಲದವರು



ಕಲ್ಲಿದ್ದಲು ಅಂಗಡಿಯ ಕಾರ್ಮಿಕ; ವಾರಾಣಸಿ

ನಕಲಿ ಬ್ರಿಟಿಷ್ ಪಾಸ್‌ಪೋರ್ಟ್ ಮಾಡಿಸುತ್ತಿದ್ದರು. ಈ ಜಾಲದಲ್ಲಿ ಛೋಟು ಸಕ್ರಿಯನಾಗಿದ್ದ. ಇದಕ್ಕಾಗಿ ಜೈಲಿಗೂ ಹೋಗಿ ಬಂದಿದ್ದ. ಒಂದು ದಿನ 'ಈಸ್ಟ್ ಆಫ್ರಿಕನ್ ಸ್ಟ್ಯಾಂಡರ್ಡ್' ಪತ್ರಿಕೆಯವರು ಪಾಸ್‌ಪೋರ್ಟ್ ಜಾಲದ ಗುಟ್ಟುಗಳನ್ನು ಹೇಳಿದರೆ, ಪತ್ರಿಕೆಯಲ್ಲಿ ಕೆಲಸ ಕೊಡುವುದಾಗಿ ಅವನನ್ನು ಪುಸಲಾಯಿಸಿದರು. ಎಲ್ಲವನ್ನೂ ಬಹಿರಂಗಗೊಳಿಸಿದ. ಕೆಲಸ ಸಿಕ್ಕಿತು. ಛೋಟು, ಮ್ಯಾನ್ ಆಫ್ ಆಲ್ ಸೀಜನ್ಸ್. ಏನಾದರೂ ತರಲೆ ಮಾಡುತ್ತಿದ್ದ. ಬ್ರಿಟಿಷರು ಚೀನಾದೊಡನೆ ಯುದ್ಧ ಆರಂಭಿಸಿದಾಗ, ಯುದ್ಧನಿಧಿಗೆ ಭಾರತೀಯ ಸಮುದಾಯದವರು ದೇಣಿಗೆ ಕೊಡುತ್ತಿದ್ದರು. ಛೋಟು ಯುದ್ಧ ಬೆಂಬಲಿಸುವ ಇಂತಹದೊಂದು ಸಭೆಗೆ ಹೋಗಿದ್ದ. ಮಾರನೆಯ ದಿನ ಪತ್ರಿಕೆಯಲ್ಲಿ ಸ್ಟೋರಿ ಪ್ರಕಟವಾಯಿತು. ಅದರಲ್ಲಿ 'ಭಾರತೀಯ ಮೂಲದ ಈ ಜನ ತಮ್ಮನ್ನು ಕೀನ್ಯಾ ಪ್ರಜೆಗಳು ಎಂದು ಕರೆದುಕೊಳ್ಳುತ್ತಾರೆ. ಇವರು ಚೀನಾದಲ್ಲಿ ಬ್ರಿಟಿಷರು ಮಾಡುವ ಯುದ್ಧಕ್ಕೆ ಸಹಾಯ ಮಾಡುವುದು ಎಷ್ಟು ಸರಿ?' ಎಂದು ಪ್ರಶ್ನೆ ಎತ್ತಿದ್ದ. ಆಗ ಭಾರತೀಯರೆಲ್ಲ ಕಷ್ಟಕ್ಕೆ ಸಿಲುಕಿದರು. ಎಲ್ಲರೂ ಹೇಗೋ ಮಾಡಿ ಪ್ರಕರಣವನ್ನು ತಣ್ಣಗಾಗಿಸಿದರು. ಛೋಟು ಕಡೆಯಿಂದ ನನಗೆ 'ದಿ ಡೈಲಿ ನೇಶನ್'ನಲ್ಲಿ ಫೋಟೊ ಜರ್ನಲಿಸ್ಟ್ ಕೆಲಸ ಸಿಕ್ಕಿತು. 400 ಶಿಲ್ಲಿಂಗ್ ಸಂಬಳ. ಆರು ವರ್ಷ ಕೆಲಸ ಮಾಡಿದೆ.

◆ **ನಿಮಗೆ ಈ ವೃತ್ತಿಯಲ್ಲಿ ಆದರ್ಶ ಮಾದರಿ ಯಾರು?**

ನನ್ನ ಕಸಿನ್ ಪ್ರಿಯರಾಮ್ ರಖಾ. ಬಿಳಿಯರೇ ತುಂಬಿಕೊಂಡಿದ್ದ ಫೋಟೊ ಜರ್ನಲಿಸ್ಟುಗಳಲ್ಲಿ ಅವನೊಬ್ಬನೇ ವರ್ಣೀಯ. 'ಟೈಮ್ಸ್' ಮತ್ತು 'ಲೈಫ್' ಪತ್ರಿಕೆಗಳಿಗೆ ಫೋಟೊ ರಿಪೋರ್ಟರ್ ಆಗಿದ್ದವನು. ಲಾಸ್ ಏಂಜಲೀಸ್‌ನ ಆರ್ಟ್ ಸ್ಕೂಲಿನಲ್ಲಿ ಕಲಿತು ನೈಜೀರಿಯಾದಲ್ಲಿ ಫೋಟೊ ಜರ್ನಲಿಸ್ಟಾಗಿದ್ದ. ನಾನು ಅಮೆರಿಕಕ್ಕೆ ಹೋಗಿ ಫೋಟೊಗ್ರಫಿ ಕಲಿಯಬೇಕೆಂದು ಸದಾ ಹೇಳುತ್ತಿದ್ದ. ನಾನು ಹೋಗಲು ತಯಾರಿ ಮಾಡಿಕೊಂಡಿದ್ದೆ. ಅಷ್ಟರಲ್ಲಿ ನೈಜೀರಿಯಾದ ಅಂತರ್‌ಕದನದಲ್ಲಿ ರಾಮರಖಾ ಕೊಲೆಯಾದನು. 1968ರಲ್ಲಿ. ಆಗವನ ವಯಸ್ಸು 32. ನಾನೇ